ಓ.ಎಸ್ ನಂಃ 384 / 2015

ಪಿ .ಡಬ್ಲ್ಯು-1

ಸಾಕ್ಷಿಯನ್ನು ದಿನಾಂಕಃ 20.09.2024 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲು ಃ- ಪ್ರತಿವಾದಿ ಪರ ಶ್ರೀ. ಎಸ್ ಅರ್ ವಿ ವಕೀಲರಿಂದ**

ಈ ದಾವಾವನ್ನು ಯಾರ ವಿರುದ್ಧ ಹೂಡಿರುತ್ತೀರಿ ಎಂದರೆ ನಸೀಮಾ ಬೇಗಂ ಹಾಗೂ ಇತರರ ವಿರುದ್ಧ ಹೂಡಿದ್ದು ಉಳಿದವರ ಹಸೆರು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಮೂಲತಃ ಯಾರಿಗೆ ಸೇರಿರುತ್ತದೆ ಎಂದರೆ ವಿಶ್ವನಾಥ್ ರವರಿಗೆ ಸೇರಿರುತ್ತದೆ ಎಂದು ನುಡಿಯುತ್ತಾರೆ. ಯಾುವ ವರುಷದಲ್ಲಿ ದಾವಾ ಸ್ವತ್ತನ್ನು ಖರೀದಿ ಮಾಡಿರುತ್ತೀರಿ ಎಂದರೆ 1993 ರಲ್ಲಿ ಎಂದು ನುಡಿಯುತ್ತಾರೆ. ಮುಂದುವರೆದು ದಿನಾಂಕ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ನಿಮಗೆ ಹೇಗೆ ಬಂದಿರುತ್ತದೆ ಎಂದರೆ ಕ್ರಯ ಪತ್ರದ ಮೂಲಕ ಬಂದಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಚೆಕ್ಕುಬಂದಿ ಪೂಃ ರಸ್ತೆ , ಪಃ ಸೈಟ್ ನಂ 8 , ಉಃ ಸೈಟ್ ನಂ 10 ದಕ್ಷಿಣಕ್ಕೆ ಸೈಟ್ ನಂ 8 ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ವಿಸ್ತೀಣ ಎಷ್ಟು ಎಂದರೆ 30*40 ಅಡಿಗಳು ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಪೂರ್ತಿ ವಿಳಾಸ ಗೊತ್ತಿದೆಯಾ ಎಂದರೆ ಕೃಷ್ಣರಾಜಪುರದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ.

ನೀವು ಎಲ್ಲಿ ವಾಸವಿರುತ್ತೀರಿ ಎಂದರೆ ಹೆನ್ರೀಸ್ , ಕೋರಮಂಡಲ್ ಕೆ ಜಿ ಎಫ್ ನಲ್ಲಿ ವಾಸವಿರುತ್ತೇನೆ. ಪ್ರತಿವಾದಿ 1 ರವರು ಗೊತ್ತಿರುತ್ತಾರಾ ಎಂದರೆ ದಾವಾ ಸ್ವತ್ತನ್ನು ಸ್ವಚ್ಛಗೊಳಿಸುವಾಗ ತೊಂದರೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿ 1 ಮತ್ತು 2 ರವರಿಗೂ ಹಾಗೂ ಈ ದಾವೆಗೂ ಸಂಬಂದ ಇದೆಯಾ ಎಂದರೆ ಹೌದು ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಖಾಲಿ ಜಾಗವಾಗಿರುತ್ತದೆ ಎಂದರೆ ಸರಿ .

ದಾವಾ ಸ್ವತ್ತು ನಿಮ್ಮದೆಂದು ಹೇಳಲು ಯಾವ ಯಾವ ದಾಖಲಾತಿಗಳನ್ನು ಹಾಜರುಪಡಿಸಿರುತ್ತೀರಿ ಎಂದರೆ ಮೂಲ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಈ ದಾವಾವನ್ನು ಏಕೆ ಹೂಡಿರುತ್ತೀರಿ ಎಂದರೆ ಪ್ರತಿವಾದಿಗಳು ತೊಂದರೆ ನೀಡಿದ ಕಾರಣ ಹೂಡಿರುತ್ತೇನೆ ಎಂದು ನುಡಿಯುತ್ತಾರೆ. ಪ್ರತಿವಾದಿ 3 ರವರಿಂದ ದಾವಾ ಹೂಡುವ ಮುನ್ನ ನಿಮಗೆ ನೋಟಿಸ್ಸು ಬಂದಿರುತ್ತದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಯಾರ ವಿರುದ್ಧ ದೂರನ್ನು ನೀಡಿರುತ್ತೀರಿ ಎಂದರೆ ಪ್ರತಿವಾದಿ 1 ಮತ್ತು 3 ರವರ ವಿರುದ್ಧ ನೀಡಿರುತ್ತೇನೆ ಎಂದು ನುಡಿಯುತ್ತಾರೆ.

ದಾವಾ ಸ್ವತ್ತು ನಿಮಗೆ ಸೇರಿದ್ದು ಎಂದು ತೋರಿಸಲು ಪಂಚಾಯಿತಿಯವರು ದಾಖಲಾತಿಗಳನ್ನು ನೀಡಿರುತ್ತಾರೆ ಎಂದರೆ ತೆರಿಗೆ ಕಟ್ಟಿರುವ ಬಗ್ಗೆ ರಶೀದಿಗಳನ್ನು ನೀಡಿರುತ್ತಾರೆ ಎಂದು

ನುಡಿಯುತ್ತಾರೆ. ದಾವಾ ಸ್ವತ್ತಿನ ಋಣಬಾರರಾಹಿತ್ಯ ಪ್ರಮಾಣ ಪತ್ರ ಯಾವ ವರುಷದಿಂದ ನಿಮ್ಮ ಹೆಸರಿಗೆ ಬರುತ್ತಿದೆ ಎಂದರೆ ನಾನು ಕ್ರಯಕ್ಕೆ ಪಡೆದಾಗಿನಿಂದ ಬರುತ್ತಿದೆ ಎಂದು ನುಡಿಯುತ್ತಾರೆ ಪ್ರತಿವಾದಿಗಳು ಯಾವಾಗ ತೊಂದರೆ ನೀಡಿರುತ್ತಾರೆಂದು ಹೇಳಿರುತ್ತೀರಿ ಎಂದರೆ 2013 ರಲ್ಲಿ ಎಂದು ನುಡಿಯುತ್ತಾರೆ. 2013 ರಲ್ಲಿ ಪ್ರತಿವಾದಿಗಳ ವಿರುದ್ದ ದೂರನ್ನು ನೀಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ದಾವಾ ಹೂಡುವ ಮೊದಲಿಗೆ ನಿಮಗೂ ಹಾಗೂ ಪ್ರತಿವಾದಿಗಳಿಗೂ ಪರಿಚಯ ಇರುತ್ತದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

ಪ್ರತಿವಾದಿಗಳು ಈ ದಾವೆಯಲ್ಲಿ ಏನು ತಕರಾರನ್ನು ಸಲ್ಲಿಸಿರುತ್ತಾರೆ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತನ್ನು ಖರೀದಿ ಮಾಡುವಾಗ ನಿಮ್ಮ ವಯಸ್ಸು ಎಷ್ಟು ಇರುತ್ತದೆ ಎಂದರೆ 37 ವರುಷ ಎಂದು ನುಡಿಯುತ್ತಾರೆ. ದಾವಾ ಸ್ವತ್ತುನ್ನು ಖರೀದಿ ಮಾಡುವ ಕಾಲಕ್ಕೆ ಏನು ಕೆಲಸ ಮಾಡುತ್ತಿದ್ದೀರಿ ಎಂದರೆ ಬೇಮಲ್ ನಲ್ಲಿ ಟಿ ಸಿ ಎಲ್ ನಲ್ಲಿ ಕೆಲಸ ಮಾಡುತ್ತಿದ್ದೇನು ಎಂದು ನುಡಿಯುತ್ತಾರೆ. ನಿಮ್ಮ ತಂದೆ ಯಾವ ವರುಷದಲ್ಲಿ ತೀರಿಕೊಂಡಿರುತ್ತಾರೆ ಎಂದರೆ 1991 ರಲ್ಲಿ ಎಂದು ನುಡಿಯುತ್ತಾರೆ.

ದಾವಾ ಸ್ವತ್ತು ವಿಶ್ವನಾಥ್ ರವರಿಗೆ ಹೇಗೆ ಬಂದಿರುತ್ತದೆ ಎಂದು ದಾಖಲಾತಿಗಳನ್ನು ನೋಡಿರುತ್ತೀರಾ ಎಂದರೆ ಸರ್ಕಾರದಿಂದ ಮಂಜೂರಾಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ 1 ರಲ್ಲಿರುವ ಸಾಕ್ಷಿಗಳು ಯಾರು ಎಂದರೆ ವೆಂಕಟೇಶ್ ಮತ್ತು ಇನ್ನೊಬ್ಬರು ಇದ್ದು ಅವರ ಹಸೆರು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಪಕ್ಕದಲ್ಲಿ ಬಸ್ ನಿಲ್ದಾಣ ಇರುತ್ತದೆ ಎಂದರೆ 1 ಕಿ ಮೀ ದೂರದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿ 1 ಮತ್ತು 3 ರವರಿಗೂ ಏನು ಸಂಬಂದ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾಸ್ವತ್ತಿಲ್ಲಿ ಕಲ್ಲನ್ನು ಯಾವ ವರುಷದಲ್ಲಿ ಹಾಕಿರುತ್ತೀರಿ ಎಂದು ಹೇಳುತ್ತೀರಿ ಎಂದರೆ 1996 ರಲ್ಲಿ ಇರಬಹುದು ಎಂದು ನುಡಿಯುತ್ತಾರೆ. ಮುಂದುವರೆದು 2 ಬಾರಿ ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಕಲ್ಲುಗಳನ್ನು ಖರೀದಿ ಮಾಡಿರುವ ಬಗ್ಗೆ ದಾಖಲಾತಿಗಳನ್ನು ನೀಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ 1 ರವರು ಯಾವ ವರುಷದಲ್ಲಿ ನಿಮ್ಮ ವಿರುದ್ದ ದೂರನ್ನು ನೀಡಿರುತ್ತಾರೆ ಎಂದರೆ 2015 ರಲ್ಲಿ ಎಂದು ನುಡಿಯುತ್ತಾರೆ. ಪ್ರತಿವಾದಿ 3 ರವರು ನೀಡಿದ ನೋಟಿಸ್ಸಿಗೆ ಪ್ರತ್ಯುತ್ತರವನ್ನು ನೀಡಿರುತ್ತೀರಾ ಎಂದರೆ ವಕೀಲರಿಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿ 3 ರವರು ದಾವಾ ಸ್ವತ್ತಿನ ಸಂಬಂದ ನಿಮಗೆ ತೊಂದರೆ ನೀಡಿರುತ್ತಾರಾ ಎಂದರೆ ದಾವಾ ಹೂಡುವ ಮುನ್ನ ನೀಡಿದ್ದು , ದಾವಾ ಹೂಡಿದ ನಂತರದಲ್ಲಿ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ.

ಅಸಲು ದಾವಾ 454/2012 ರ ಬಗ್ಗೆ ಗೊತ್ತಿರುತ್ತದೆಯಾ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವಾದ ದಾಖಲಾತಿಗಳನ್ನು ತೆಗೆದುಕೊಂಡಿರುತ್ತೀರಾ ಎಂದರೆ ಇಲ್ಲ ಎಂದು

ನುಡಿಯುತ್ತಾರೆ. ಪ್ರತಿವಾದಿ 3 ರವರಿಗೆ ಸೇರಿದ ಸ್ವತ್ತಿನ ವಿಸ್ತೀರ್ಣ 40 * 30 ಅಡಿಗಳು ಇರುತ್ತದೆ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪಂಚಾಯಿತಿಯವರು ಸದರಿ ಸ್ವತ್ತಿನ ಸಂಬಂದ ಪ್ರತಿವಾದಿ 3 ರವರಿಗೆ ಸ್ವಾಧೀನ ಪತ್ರವನ್ನು ನೀಡಿರುತ್ತಾರೆ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಸ್ವತ್ತಿನ ಸಂಬಂದ ಪ್ರತಿವಾದಿ 3 ರವರ ಹೆಸರಿನಲ್ಲಿ ಇ ಸಿ ಬರುತ್ತಿದೆ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ 3 ರವರು ಸ್ವತ್ತನ್ನು ಖರೀದಿ ಮಾಡಿದಾಗಿನಿಂದ ಅವರೇ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ.

ದಾವಾ ಸ್ವತ್ತು ಯಾವ ಸರ್ವೆ ನಂಬರಲ್ಲಿ ಬರುತ್ತದೆ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ವಿಶ್ವನಾಥ್ ರವರ ಹೆಸರಿಗೆ ಇದ್ದ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

**<u>ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ)**

**ಓದಿ ಹೇಳಿ ಕೇಳಿ ಸರಿ ಇದೆ,**
**ಸಹಿ/-**
**(ಮಂಜು ಎಂ)**
**2 ನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ಕೆ.ಜಿ.ಎಫ್**